

بِسْمِ اللّٰہِ الرَّحْمٰنِ الرَّحِیْمِ

# ಜಲ್ಸಾ ಸಾಲಾನ ಫ್ರಾನ್ಸ್ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಫ್ರಾನ್ಸ್‌ನ ಜಲ್ಸಗಾಹ್ ನಿಂದ 04–10–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ ـ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ إِيَّاكَ نَعْبُدُ وَإِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದು ನಿಮ್ಮ (ಎಂದರೆ ಫ್ರಾನ್ಸಿನ) ಜಲ್ಸಾ ಸಾಲಾನ ಪ್ರಾರಂಭವಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲ್ಲೈಹಿಸ್ಸಲಾಮ್ ಜಲ್ಸವನ್ನು ಶುದ್ಧವಾದ ಧಾರ್ಮಿಕ ಸಮಾವೇಶ ಎಂದು ಹೆಸರಿಸಿದ್ದಾರೆ. ಈ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬನಿಗೆ ಸ್ಪಷ್ಟವಾಗಿ ತಿಳಿದಿರಬೇಕು – ಧಾರ್ಮಿಕ, ಜ್ಞಾನ ಸಂಬಂಧವಾದ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಅದರಲ್ಲಿ ಅಭಿವೃದ್ಧಿ ಗಳಿಸಲು ನಾವು ಇಲ್ಲಿ ಜಮಾಯಿಸಿದ್ದೇವೆ ಎಂದು. ನಾವು ನಮ್ಮ ಧಾರ್ಮಿಕ, ಜ್ಞಾನ ಸಂಬಂಧವಾದ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಹೇಗೆ ಉತ್ತಮಪಡಿಸಬಹುದೆಂಬ ಯೋಚನೆಗಳೊಂದಿಗೆ ಈ ಮೂರು ದಿನಗಳನ್ನು ಕಳೆಯುವೆವು ಎಂಬ ಚಿಂತೆ ನಮಗೆ ಇರಬೇಕು. ಇಂತಹ ಯೋಚನೆ ಹೊಂದಿರುವುದಿಲ್ಲವಾದರೆ ಇಲ್ಲಿಗೆ ಆಗಮಿಸುವುದು ಲಾಭದಾಯಕವಾಗಲಾರದು. ಇಂದಿನ ಈ ಕಾಲಘಟ್ಟದಲ್ಲಿ ಲೋಕವು ಅಲ್ಲಾಹನನ್ನು ಮರೆತು ಬಿಡುತ್ತಾ ಇದೆ. ಪ್ರತಿಯೊಂದು ಧರ್ಮದ ಅನುಯಾಯಿ ತನ್ನ ಧರ್ಮದಿಂದ ದೂರ ಸರಿಯುತ್ತಿದ್ದಾನೆ. ಮುಸ್ಲಿಮರಲ್ಲಿ ಸಹ ಲೌಕಿಕ ಆಸಕ್ತಿ ಜಯಗಳಿಸಿದೆ. ಹೀಗಿರುವಾಗ ಅಹ್ಮದಿಯರಾದ ನಾವು ಸಹ ನಮ್ಮ ಸ್ಥಿತಿಯನ್ನು ಉತ್ತಮ ಪಡಿಸಲು ಗಮನ ಹರಿಸುವುದಿಲ್ಲವಾದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲ್ಲೈಹಿಸ್ಸಲಾಮರನ್ನು ಬೈಅತ್ ಮಾಡಿರುವುದು ಕೇವಲ ಒಂದು ಬಾಹ್ಯ ಪ್ರಕಟಣೆ ಮಾತ್ರವಾಗುತ್ತದೆ. ಅದು ಆತ್ಮಬಂಧ ರಹಿತವಾಗಿರುತ್ತದೆ. ನಮ್ಮ ಬೈಅತ್ ಪ್ರತಿಜ್ಞೆ ಕೇವಲ ನಾಮ ಮಾತ್ರ ಪ್ರತಿಜ್ಞೆ ಆಗುತ್ತದೆ. ನಾವು ಆ ಪ್ರತಿಜ್ಞೆ ಈಡೇರಿಸದೆ ಇರುವಾಗ, ಅಂತಹ ಸ್ಥಿತಿಯಲ್ಲಿ ನಾವು ಇಲ್ಲಿ ಜಮಾಯಿಸುವುದಾದರೆ ನಾವು ಒಂದು ಲೌಕಿಕ ಜಾತ್ರೆಗೆ ಜಮಾಯಿಸಿದ ಹಾಗೆ ಆಗುತ್ತದೆ. ಪ್ರತಿಯೊಬ್ಬ ಅಹ್ಮದಿ ಈ ವಿಷಯದ ಬಗ್ಗೆ ಬಹಳ ಗಾಢವಾಗಿ ಚಿಂತಿಸಬೇಕು.

ನಾವು ನಮ್ಮ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಲು, ನಮ್ಮ ಸಂತಾನಗಳನ್ನು ರಕ್ಷಿಸಲು ಜಲ್ಸವನ್ನು ಜರಗಿಸುವ ಉದ್ದೇಶ ಲಕ್ಷ್ಯಗಳನ್ನು ನಮ್ಮ ಮುಂದೆ ಇರಿಸುವುದು ಆವಶ್ಯಕವಾಗಿದೆ. ಜಲ್ಸದ ಈ ಮೂರು ದಿನಗಳನ್ನು ಬೈಅತ್ ಪ್ರತಿಜ್ಞೆಗಳಿಗೆ ಅನುಸಾರವಾಗಿ ನಾವು ಕಳೆಯಬೇಕಲ್ಲದೆ ಈ ಪ್ರತಿಜ್ಞೆಗಳು ಯಾವಾಗಲೂ ನಮ್ಮ ಜೀವಿತದ ಭಾಗಗಳಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲ್ಲೈಹಿಸ್ಸಲಾಮ್ ಜಲ್ಸದ ಉದ್ದೇಶವನ್ನು ವಿವರಿಸುತ್ತಾ ಈ ರೀತಿ ಹೇಳಿದ್ದಾರೆ, ನೀವು ಪರಲೋಕದ ಬಗ್ಗೆ ಚಿಂತಿಸುವವರಾಗಿರಿ. ನಿಮ್ಮಲ್ಲಿ ದೇವಭಯ ಸೃಷ್ಟಿಸಲ್ಪಡಲಿ. ನಿಮ್ಮಲ್ಲಿ ತಖ್ವ ಸೃಷ್ಟಿಸಲ್ಪಡಲಿ. ಮೃದು ಹೃದಯಿಗಳಾಗಿರಿ. ಪರಸ್ಪರ ಪ್ರೀತಿ ವಾತ್ಸಲ್ಯದ ಪರಿಸರ ಸೃಷ್ಟಿಸಿರಿ. ವಿನಯ ಮತ್ತು ನಿರಾಡಂಬರತೆ ಸೃಷ್ಟಿಸಲ್ಪಡಲಿ. ಸತ್ಯವನ್ನು ಅವಲಂಬಿಸಿರಿ. ಧರ್ಮಕ್ಕೋಸ್ಕರ ಕಾರ್ಯನಿರತರಾಗಿರಿ.

ನಾವು ಇಲ್ಲಿ ಜಮಾಯಿಸಿರುವ ಉದ್ದೇಶಲಕ್ಷ್ಯ ಇವುಗಳೇ ಆಗಿವೆ. ಹಝ್ರತ್ ಮಸೀಹ್ ಮೌಊದ್ ಅಲ್ಲೈಹಿಸ್ಸಲಾಮರನ್ನು ನಂಬುವ ಪ್ರತಿಯೊಬ್ಬ ಪುರುಷ, ಮಹಿಳೆ, ಯುವಜನರು ಮತ್ತು ವೃದ್ಧರು ಹಝ್ರತ್ ಮಸೀಹ್ ಮೌಊದ್ ಅಲ್ಲೈಹಿಸ್ಸಲಾಮರ ಉಪದೇಶ ಪ್ರಕಾರ ಪರಲೋಕದ ಬಗ್ಗೆ ಎಷ್ಟು ಗಂಭೀರವಾಗಿ ಚಿಂತಿಸಬೇಕೆಂದರೆ ಲೌಕಿಕ ವಸ್ತುಗಳು ಅದರ ಎದುರಿಗೆ ಯಾವುದೇ ಸ್ಥಾನ ಹೊಂದಿರಬಾರದು. ಈ ಪರಿಸರದಲ್ಲಿ ಜೀವಿಸುತ್ತಿರುವಾಗ ಇದು ಬಹಳ ದೊಡ್ಡ ಕೆಲಸವಾಗಿದೆ. ಬಹಳ ದೊಡ್ಡ ಪಂಥಹ್ವಾನವೇ ಆಗಿದೆ. ಅದನ್ನು ಈಡೇರಿಸಲು ಬಹಳ ದೊಡ್ಡ ಜಿಹಾದ್ ಮಾಡುವ ಆವಶ್ಯಕತೆ ಇರುತ್ತದೆ. ಅಲ್ಲಾಹನ ಅಸ್ತಿತ್ವದ ಬಗ್ಗೆ ಪರಿಪೂರ್ಣ ವಿಶ್ವಾಸವನ್ನು ಹೊಂದಿರುವಾಗ ಮಾತ್ರ ಪರಲೋಕದ ಬಗ್ಗೆ ಚಿಂತಿಸಲು ಸಾಧ್ಯವಾಗುತ್ತದೆ. ಇಹಲೋಕ ಜೀವಿತ ಕೇವಲ ಕೆಲವು ವರ್ಷಗಳಿಗಾಗಿವೆ ಎಂಬ ಪ್ರಜ್ಞೆ ಇರಬೇಕು. ಬುದ್ಧಿಶಾಲಿಯಾದವನು ತಾತ್ಕಾಲಿಕ ವಸ್ತುವನ್ನು ಶಾಶ್ವತ ವಸ್ತುವಿಗೋಸ್ಕರ ಬಲಿದಾನ ಮಾಡುತ್ತಾನೆ. ಆದರೆ ಸಂಭವಿಸುತ್ತಿರುವುದೇನೆಂದರೆ, ನಾವು ಈ ತಾತ್ಕಾಲಿಕ ಜೀವಿತಕ್ಕೋಸ್ಕರ ನಮ್ಮ ಶಾಶ್ವತ ಜೀವಿತವನ್ನು ಬಲಿದಾನ ಮಾಡುತ್ತಿದ್ದೇವೆ. ಹೀಗೆ ವರ್ತಿಸಿ ಲೌಕಿಕವಾದಿ ಮನುಷ್ಯ ತನ್ನನ್ನು ಬಹಳ ಬುದ್ಧಿಶಾಲಿಗಳೆಂದು ಭಾವಿಸುತ್ತಾರೆ. ಆದರೆ ಓರ್ವ ಸತ್ಯವಿಶ್ವಾಸಿ ತದ್ವಿರುದ್ಧವಾಗಿ ವರ್ತಿಸುತ್ತಾನೆ. ಹಾಗೆ ಸತ್ಯವಿಶ್ವಾಸಿ ವರ್ತಿಸಬೇಕಾದುದೂ ಆಗಿದೆ. ಆಗ ಮಾತ್ರ ಅವನು ಸತ್ಯವಿಶ್ವಾಸಿ ಎಂದು ಕರೆಯಲ್ಪಡುತ್ತಾನೆ. ಅವನು ತನ್ನ ಹೃದಯದಲ್ಲಿ ಅಲ್ಲಾಹನ ಬಗ್ಗೆ ಭಯವನ್ನು ಹೊಂದಿರುತ್ತಾನೆ. ಅಲ್ಲಾಹನ ಬಗ್ಗೆ ಅವನಿಗಿರುವ ಪ್ರೀತಿ ಇತರ ವಸ್ತುಗಳ ಬಗ್ಗೆ ಇರುವ ಪ್ರೀತಿಗಿಂತ ಮಿಗಿಲಾಗಿರುತ್ತದೆ. ಅವನು ಭಯಹೊಂದಿರುವುದು ತನಗೆ ಶಿಕ್ಷೆ ದೊರಕುವುದೆಂಬುದರ ಬಗ್ಗೆಯಲ್ಲ. ನನ್ನ ಪ್ರಿಯ ಅಲ್ಲಾಹನು ನನ್ನ ಬಗ್ಗೆ ಸಿಟ್ಟಾಗದಿರಲಿ ಎಂಬುದೇ ಅವನ ಭಯವಾಗಿದೆ. ಮನುಷ್ಯನಲ್ಲಿ ಇಂತಹ ಪ್ರೀತಿಯ ಮನೋಭಾವ ತಲೆದೋರಿದಾಗ ಅವನು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾನೆ.

ಆದುದರಿಂದ ಈ ವಿಷಯಗಳ ತಿರುಳನ್ನು ಹೊಂದುವುದು ಆವಶ್ಯಕವಾಗಿದೆ. ಇವುಗಳನ್ನೇ ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮ್ ನಮ್ಮಲ್ಲಿ ಸೃಷ್ಟಿಸಲು ಇಚ್ಛಿಸುತ್ತಾರೆ. ಕೇವಲ ಬಾಹ್ಯ ಸಿಪ್ಪೆ ಇದ್ದರೆ ಸಾಲದು, ತಿರುಳು ಇರಬೇಕು. ಆತ್ಮ ಇರಬೇಕು. ಇವುಗಳನ್ನು ದೃಷ್ಟಿಯಲ್ಲಿರಿಸಿ ನಾವು ನಮ್ಮನ್ನು ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ನಾವು ಈ ಉದ್ದೇಶಲಕ್ಷ್ಯಗಳೊಂದಿಗೆ ಜಲ್ಸಕ್ಕೆ ಆಗಮಿಸಿರುವೆವ್ವೋ, ಈ ಉದ್ದೇಶಲಕ್ಷ್ಯಗಳನ್ನು ಗಳಿಸಲು ನಮ್ಮೊಳಗೆ ಒಂದು ಬೇಗುದಿ ಇದೆಯೇ ಎಂದು ಪರಿಶೋಧಿಸಬೇಕು. ನಾವು ಮನುಷ್ಯ ಸಹಜವಾದ ಬಲಹೀನತೆಗಳ ಕಾರಣದಿಂದ ಈ ಉದ್ದೇಶಲಕ್ಷ್ಯಗಳನ್ನು ಗಳಿಸುವುದರಲ್ಲಿ ತಪ್ಪು ಮಾಡಿದ್ದರೆ ನಮ್ಮಿಂದ ಕೊರತೆಗಳು ಸಂಭವಿಸಿದ್ದರೆ, ಇನ್ನು ಮುಂದೆ ನಾವು ದೃಢ ನಿಶ್ಚಯದೊಂದಿಗೆ ಈ ಒಳಿತುಗಳನ್ನು ಸೃಷ್ಟಿಸಲು ನಮ್ಮ ಸಾಮರ್ಥ್ಯಕ್ಕನುಸಾರವಾಗಿ ಪ್ರಯತ್ನಿಸುವೆವು ಎಂದು ನಿರ್ಧರಿಸಬೇಕು. ನಾವು ಲೌಕಿಕ ವಿಷಯಗಳಿಗಿಂತ ಹೆಚ್ಚಾಗಿ ಪರಲೋಕದ ಬಗ್ಗೆ ಚಿಂತಿಸುವವರಾಗುವೆವು ಎಂದು ಪ್ರತಿಜ್ಞೆ ಮಾಡಬೇಕು. ನಾವು ಅಲ್ಲಾಹನ ಬಗ್ಗೆ ಭಯಕ್ಕೆ ಮತ್ತು ಪ್ರೀತಿಗೆ ಪ್ರತಿಯೊಂದರ ಮೇಲೆ ಅಗ್ರಸ್ಥಾನ ನೀಡುವೆವು. ನಾವು ತಖ್ವದ ಸೂಕ್ಷ್ಮ ಮಾರ್ಗದಲ್ಲಿ ಚಲಿಸಲು ಪೂರ್ಣ ಸಾಮರ್ಥ್ಯದೊಂದಿಗೆ ಪ್ರಯತ್ನಿಸುವೆವು. ನಾವು ನಮ್ಮ ಹೃದಯಗಳಲ್ಲಿ ಅನ್ಯರ ಬಗ್ಗೆ ಮೃದುಭಾವನೆ ಸೃಷ್ಟಿಸುವೆವು. ನಾವು ಪರಸ್ಪರ ಭ್ರಾತೃ ಭಾವನೆ ಮತ್ತು ಪ್ರೀತಿ ವರ್ಧಿಸುವೆವು. ವಿನಯ ಮತ್ತು ಆದರ ಭಾವನೆಯಲ್ಲಿ ವರ್ಧನೆ ಹೊಂದುವವರಾಗುವೆವು ಎಂದು ಪ್ರತಿಜ್ಞೆ ಮಾಡಬೇಕು. ಸತ್ಯ ಮತ್ತು ನೇರನುಡಿ ನಮ್ಮ ವೈಶಿಷ್ಟ್ಯವಾಗಿ ಪ್ರತಿಯೊಬ್ಬ ಹೀಗೆ ಹೇಳುವವನಾಗಬೇಕು – ಅಹ್ಮದಿಯರು ಯಾವಾಗಲೂ ಸತ್ಯದ ಮೇಲೆ ನೆಲೆ ನಿಂತಿರುತ್ತಾರೆ, ಅವರು ಸತ್ಯ ಹೇಳುತ್ತಾರೆ ಮತ್ತು ಆ ಸತ್ಯ ಹೇಳಿದ ಕಾರಣದಿಂದ ದೊಡ್ಡದಾದ ನಷ್ಟವನ್ನು ಸಹ ಸಹಿಸಲು ಅವರು ಸಿದ್ಧರಾಗಿರುತ್ತಾರೆ ಎಂದು. ಅಲ್ಲಾಹನ ಧರ್ಮದ ಸಂದೇಶವನ್ನು ನಮ್ಮ ಪರಿಸರದಲ್ಲಿ ತಲಪಿಸಲು ಪ್ರಯತ್ನ ಮಾಡುವೆವು ಎಂದೂ ನೈಜ ಇಸ್ಲಾಮ್ ಏನೆಂದು ಅವರಿಗೆ ತಿಳಿಸಿ ಕೊಡುವೆವು ಎಂದೂ ನಾವು ಪ್ರತಿಜ್ಞೆ ಮಾಡಬೇಕು. ನಾವು ನಮ್ಮ ಈ ಪ್ರತಿಜ್ಞೆಗಳನ್ನು ಈಡೇರಿಸುವವರಾದರೆ ನಾವು ಖಂಡಿತವಾಗಿಯೂ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವವರಾಗುವೆವು.

ಆದುದರಿಂದ ಬನ್ನಿರಿ, ನಾವು ಇವುಗಳನ್ನು ಮಾಡಲು ಕಾರ್ಯಕ್ರಮ ಸೂಚಿಯನ್ನು ಸಿದ್ಧಪಡಿಸುವವರಾಗೋಣ. ಪರಲೋಕದ ಬಗ್ಗೆ ಚಿಂತಿಸುವವನು ಮತ್ತು ಅಲ್ಲಾಹನ ಬಗ್ಗೆ ಭಯಪಡುವವನು ಎಲ್ಲದಕ್ಕಿಂತ ಮೊದಲು ತನ್ನ ಇಬಾದತ್‌ಗಳನ್ನು ಸಂರಕ್ಷಿಸುವ ಬಗ್ಗೆ ಗಮನ ಹರಿಸುತ್ತಾನೆ. ತನ್ನ ಜೀವಿತೋದ್ದೇಶವಾಗಿ ಏನನ್ನು ಅಲ್ಲಾಹನು ನಿಶ್ಚಯಿಸಿದ್ದಾನೆ ಎಂದು ನೋಡುತ್ತಾನೆ. ಅಲ್ಲಾಹನು ಹೇಳುತ್ತಾನೆ: **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನಿ.** ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಅರ್ಥ ಹೀಗೆ ಹೇಳಿದ್ದಾರೆ, ಅಲ್ಲಾಹನು ಹೇಳುತ್ತಾನೆ: ನಾನು ಜಿನ್ನ್ ಮತ್ತು ಇನ್‌ಸಾನ್ ವರ್ಗಗಳನ್ನು ಸೃಷ್ಟಿಸಿರುವುದು ಅವರು ನನ್ನನ್ನು ಗುರುತಿಸಲಿಕ್ಕೋಸ್ಕರವೂ ನನ್ನನ್ನು ಆರಾಧಿಸಲಿಕ್ಕೋಸ್ಕರವೂ ಆಗಿದೆ. ಆದುದರಿಂದ ಈ ವಚನದ ಪ್ರಕಾರ ಮನುಷ್ಯನ ಜೀವಿತದ ಮುಖ್ಯ ಉದ್ದೇಶ ಅಲ್ಲಾಹನ ಬಗ್ಗೆ ಜ್ಞಾನ ಗಳಿಸುವುದು ಮತ್ತು ಅವನ ಆರಾಧನೆ ಮಾಡುವುದು ಮತ್ತು ಅವನಿಗೆ ಸೇರಿದವನಾಗುವುದು ಆಗಿದೆ. ಈ ಉದ್ದೇಶಕ್ಕೋಸ್ಕರ ನಮಗೆ ಕಲಿಸಲಾದ ಆರಾಧನೆಯ ರೀತಿ ಯಾವುದು? ಅದು ನಮಾಝ್ ಅನುಷ್ಠಿಸುವುದಾಗಿದೆ. ಅಲ್ಲಾಹನು ಹೇಳುತ್ತಾನೆ: **ಇನ್ನಸ್ಸಲಾತ ಕಾನತ್ ಅಲಲ್‌ಮೂಮಿನೀನ ಕಿತಾಬನ್ ಮೌಖೂತ.** ನಿಸ್ಸಂದೇಹವಾಗಿಯೂ ನಮಾಝ್ ನಿರ್ದಿಷ್ಟ ಸಮಯಗಳಲ್ಲಿ ನಿರ್ವಹಿಸಲ್ಪಡಲಿಕ್ಕೆ ವಿಶ್ವಾಸಿಗಳಿಗೆ ಕಡ್ಡಾಯಗೊಳಿಸಲಾಗಿದೆ.(4:104). ಅಲ್ಲಾಹನು ಹೀಗೆಯೂ ಹೇಳಿದ್ದಾನೆ: **ಹಾಫಿಝೂ ಅಲಸ್ಸಲವಾತಿ ವಸ್ಸಲಾತಿಲ್ ಉಸ್ತಾ.** ಎಲ್ಲಾ ನಮಾಝ್‌ಗಳನ್ನೂ (ವಿಶೇಷವಾಗಿ ಕೆಲಸದ) ಮಧ್ಯೆ ಬರುವ ನಮಾಝನ್ನು ನೀವು ಜಾಗರೂಕತೆಯಿಂದ ನಿರ್ವಹಿಸಿರಿ.(2:239). ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಪರಿಶೋಧಿಸಬೇಕು ನಾವು ಈ ಆಜ್ಞೆ ಪಾಲಿಸುತ್ತಿದ್ದೇವೆಯೋ ಎಂದು.

ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಇನ್ನಮಾ ಯಅ್‌ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿಲ್ ಆಖಿರಿ.** ಯಾರು ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ ಅವರೇ ಮಸ್‌ಜಿದ್‌ಗಳನ್ನು ಜನನಿಬಿಡಗೊಳಿಸುತ್ತಾರೆ.(9:18). ನಾವೆಲ್ಲರೂ ನಮ್ಮನ್ನು ಮೂಮಿನ್ (ವಿಶ್ವಾಸಿ) ಎಂದು ಹೇಳುತ್ತೇವೆ. ಆದರೆ ಅಲ್ಲಾಹನ ದೃಷ್ಟಿಯಲ್ಲಿ ಮತ್ತು ಅವನ ರಸೂಲರ ದೃಷ್ಟಿಯಲ್ಲಿ ಮೂಮಿನ್ (ವಿಶ್ವಾಸಿ) ಅಲ್ಲಾಹನ ಭವನವನ್ನು ಜನನಿಬಿಡವಾಗಿ ಇರಿಸುವವರಾಗಿರುತ್ತಾರೆ. ಇಲ್ಲಿ ಒಂದು ವಿಷಯ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಕೇವಲ ಮಸ್‌ಜಿದ್‌ಗೆ ಆಗಮಿಸುವುದು ಸಾಕಾಗಲಾರದು. ಅಲ್ಲಾಹನನ್ನೂ ಅಂತಿಮ ವಿಚಾರಣೆಯ ದಿನದ ಬಗ್ಗೆಯೂ ವಿಶ್ವಾಸವನ್ನು ಹೊಂದಿದವರಾಗಬೇಕು. ಇಂತಹ ಯೋಚನೆ ಹೊಂದಿದವನು ಅಲ್ಲಾಹನಿಗೆ ಭಯಪಡುವವನಾಗುವನು. ಅವನು ಮಸ್‌ಜಿದ್‌ಗೆ ಆಗಮಿಸಿ ಕಲಹಗಳನ್ನು ಮಾಡಲಾರನು. ಯಾರ ನಮಾಝ್‌ಗಳು ಅವರಿಗೆ ವಿನಾಶಕಾರಿಯಾಗಿವೆಯೋ ಅಂತಹ ಜನರಲ್ಲಿ ಅವನು ಸೇರಲಾರ. ತಖ್ವವನ್ನು ಹೊಂದಿ ಮಸ್‌ಜಿದ್‌ಗೆ ಆಗಮಿಸುವವರು ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಇವೆರಡನ್ನೂ ಈಡೇರಿಸುತ್ತಾರೆ. ಇಂತಹ ಜನರಿಗೆ ಶುಭವಾರ್ತೆ ನೀಡುತ್ತಾ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖಿಯಾಮತ್ ದಿನ ಅಲ್ಲಾಹನು ದೇವದೂತರೊಂದಿಗೆ ಹೇಳುವನು: ನನ್ನ ದಾಸರ ನಮಾಝ್‌ಗಳ ಕಡೆಗೆ ನೋಡಿರಿ. ಯಾರ ನಮಾಝ್‌ಗಳು ಪೂರ್ಣವಾಗಿವೆಯೋ ಅವರ ಲೆಕ್ಕ ಸ್ವಚ್ಛವಾಗಿರುವುದು. ಯಾರದಾದರೂ ಫರ್ಝ್ ನಮಾಝ್‌ಗಳಲ್ಲಿ ಕೊರತೆ ಇದ್ದಲ್ಲಿ ಅವರ ಬಗ್ಗೆ ಅಲ್ಲಾಹನು ಹೇಳಿದನು: ಅವರ ನಫ್ಲ್ ಇಬಾದತ್‌ಗಳನ್ನು ನೋಡಿರಿ. ಅವರ ಫರ್ಝ್ ನಮಾಝ್‌ಗಳಲ್ಲಿ ಏನಾದರೂ ಕೊರತೆ ಇದ್ದರೆ ನಫ್ಲ್‌ಗಳಿಂದ ಅದನ್ನು ಪೂರ್ಣಗೊಳಿಸಿರಿ. ಇದು ಶುಭವಾರ್ತೆಯಾಗಿದೆ. ಅದರೊಂದಿಗೆ ಅಲ್ಲಾಹನ ಅನುಗ್ರಹ ಗಳಿಸಲು ನಫ್ಲ್‌ಗಳ ಕಡೆಗೆ ಗಮನವನ್ನು ಸಹ ಹರಿಯಿಸಲಾಗಿದೆ. ಸತ್ಯವಿಶ್ವಾಸಿಯಾದವನು ಅಲ್ಲಾಹನ ಭಯವನ್ನು ಹೃದಯದಲ್ಲಿ ಹೊಂದಿ ಅವನ ಅನುಗ್ರಹ ಗಳಿಸಲು

ಫರ್ಝ್ ಆರಾಧನೆಗಳ ಕಡೆಗೆ ಗಮನ ಹರಿಸುವುದರೊಂದಿಗೆ ನಫ್ಲ್ ಆರಾಧನೆಗಳ ಕಡೆಗೂ ಗಮನ ಹರಿಸುತ್ತಾನೆ. ಇಂತಹ ಜನರೇ ವಾಸ್ತವಿಕವಾಗಿ ಅಲ್ಲಾಹನ ಭಯವನ್ನು ಹೊಂದಿರುತ್ತಾರೆ. ಅವರು ತಖ್ವದಲ್ಲಿ ಚಲಿಸುವವರಾಗಿದ್ದಾರೆ. ಆದುದರಿಂದ ಪ್ರತಿಯೊಬ್ಬನು ನಮ್ಮಲ್ಲಿ ಇವುಗಳಿವೆಯೋ ಎಂದು ಪರಿಶೋಧಿಸಬೇಕು. ವಾಸ್ತವಿಕ ಆಬಿದ್ (ಆರಾಧನೆ ಮಾಡುವವ) ಪ್ರತಿಯೊಂದು ರೀತಿಯ ಒಳಿತನ್ನು ಮಾಡಲು ಪ್ರಯತ್ನಿಸುತ್ತಾನೆ.

ಯಾರಲ್ಲಿ ತನ್ನ ಸಹೋದರನ ಬಗ್ಗೆ ಪ್ರೀತಿ ಇಲ್ಲವೋ ಅವನಲ್ಲಿ ವಾಸ್ತವಿಕ ತಖ್ವ ಇರುವುದಿಲ್ಲ. ಯಾರು ಮೃದು ಹೃದಯಿಯಾಗಿಲ್ಲವೋ ಅವನು ಸಹ ತನ್ನ ಬಗ್ಗೆ ಚಿಂತಿಸಲಿ. ಯಾರ ಮನೆಯಲ್ಲಿ ಪತ್ನಿ ಮತ್ತು ಮಕ್ಕಳು ಅವನಿಂದ ಕಷ್ಟ ಅನುಭವಿಸುತ್ತಿರುವರೋ ಅವನು ಸಹ ತಖ್ವ ರಹಿತನಾಗಿದ್ದಾನೆ. ಯಾವ ಪತ್ನಿಯರು ತಮ್ಮ ಪತಿ ಮತ್ತು ಮಕ್ಕಳ ಹಕ್ಕುಗಳನ್ನು ಕೊಡುವುದಿಲ್ಲವೋ ಮತ್ತು ಅನಾವಶ್ಯಕ ಬೇಡಿಕೆಗಳನ್ನು ಮುಂದಿಡುತ್ತಾರೋ ಅವರ ಹೃದಯ ಸಹ ತಖ್ವ ರಹಿತವಾಗಿದೆ. ಪರಸ್ಪರ ಸಂಬಂಧಗಳಲ್ಲಿ ಅಲ್ಲಾಹನಿಗೋಸ್ಕರ ಪ್ರೀತಿ ಮತ್ತು ಮೃದುತ್ವದಿಂದ ವರ್ತಿಸುವವರೇ ವಾಸ್ತವಿಕವಾಗಿ ತಖ್ವದಲ್ಲಿರುವವರಾಗಿದ್ದಾರೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖಿಯಾಮತ್ ದಿನ ಅಲ್ಲಾಹನು ವಿಚಾರಿಸುವನು. ನನ್ನ ಮಹತ್ವ ಮತ್ತು ನನ್ನ ಘನತೆಗೋಸ್ಕರ ಒಬ್ಬರಿನ್ನೊಬ್ಬರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದವರು ಎಲ್ಲಿದ್ದಾರೆ. ಈ ದಿನ ನನ್ನ ನೆರಳಿನ ಹೊರತು ಬೇರೆ ನೆರಳು ಯಾವುದೂ ಇಲ್ಲದಿರುವಾಗ ನನ್ನ ನೆರಳಿನಾಶ್ರಯ ಅವರಿಗೆ ನೀಡುವೆನು.

ನಾವು ಧ್ಯೇಯ ವಚನ ಘೋಷಿಸುತ್ತೇವೆ, ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂದು. ನಾವು ಮೊದಲು ನಮ್ಮ ಮನೆಗಳಲ್ಲಿ ಮತ್ತು ನಮ್ಮ ಪರಿಸರದಲ್ಲಿ ಅದನ್ನು ಕೃತಿರೂಪದಲ್ಲಿ ಪ್ರಕಟಿಸುವುದು ಆವಶ್ಯಕವಾಗಿದೆ. ಆ ಮೂಲಕ ಈ ಸಂದೇಶ ನೈಜ ರೂಪದಲ್ಲಿ ತಲಪಿಸುವವರಾಗಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಮುಸ್ಲಿಮನು ಮುಸ್ಲಿಮನ ಸಹೋದರನಾಗಿದ್ದಾನೆ. ಒಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಮೇಲೆ ದೌರ್ಜನ್ಯ ಮಾಡುವುದಿಲ್ಲ. ಅವನನ್ನು ಒಬ್ಬಂಟಿಗನಾಗಿರಲು ಬಿಟ್ಟು ಬಿಡುವುದೂ ಇಲ್ಲ. ಒಬ್ಬನು ತನ್ನ ಸಹೋದರನ ಆವಶ್ಯಕತೆಗಳನ್ನು ಈಡೇರಿಸಲು ಪ್ರಯತ್ನಿಸಿದರೆ ಅಲ್ಲಾಹನು ಹಾಗೆ ಮಾಡುವವನ ಆವಶ್ಯಕತೆಗಳನ್ನು ನೆರವೇರಿಸಿ ಕೊಡುವನು. ಒಬ್ಬನು ಮುಸ್ಲಿಮನ ಕಷ್ಟವನ್ನು ನಿವಾರಿಸಿದರೆ ಖಿಯಾಮತ್ ದಿನ ಅಲ್ಲಾಹನು ಹಾಗೆ ಕಷ್ಟಪರಿಹರಿಸಿದವನ ಶಿಕ್ಷೆಗಳಲ್ಲಿ ಕಡಿಮೆ ಮಾಡುವನು. ಒಬ್ಬನು ಇನ್ನೊಬ್ಬನ ಕುಂದುಕೊರತೆಗಳನ್ನು ಮರೆಮಾಡಿದರೆ ಅಲ್ಲಾಹನು ಖಿಯಾಮತ್ ದಿನ ಅವನ ಕುಂದುಕೊರತೆಗಳನ್ನು ಮರೆಮಾಡುವನು.

ಈ ದಿನಗಳಲ್ಲಿ ನಮ್ಮ ಯೋಚನೆಗಳು ಒಳಿತುಗಳ ಕಡೆಗೆ ತಿರುಗುತ್ತಿರುವಾಗ ನಮ್ಮನ್ನು ಪರಿಶೋಧಿಸುತ್ತಾ ನಮ್ಮ ಇಬಾದತ್‌ಗಳ ಬಗ್ಗೆ ಮತ್ತು ಹುಖೂಖುಲ್ ಇಬಾದ್ ಈಡೇರಿಸುವ ಬಗ್ಗೆ ಗಮನ ಹರಿಸಬೇಕು. ಮೃದು ಹೃದಯ, ಪರಸ್ಪರ ಪ್ರೀತಿ ಮತ್ತು ವಿನಯದ ವಾಸ್ತವಿಕತೆ ಏನೆಂದು ತಿಳಿದುಕೊಳ್ಳಲು ಪ್ರಯತ್ನಿಸಿರಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿಕೊಂಡ ಬೈಅತ್ ಪ್ರತಿಜ್ಞೆಗಳಲ್ಲಿ ಶಿರ್ಕ್ ತ್ಯಜಿಸುವ ಬಗ್ಗೆ, ನಮಾಝ್‌ಗಳ ಅನುಷ್ಠಾನಗಳ ಬಗ್ಗೆ ಫರ್ಝ್ ಮತ್ತು ನಫ್ಲ್ ನಮಾಝ್‌ಗಳನ್ನು ಅನುಷ್ಠಿಸುವ ಬಗ್ಗೆ ಪ್ರತಿಜ್ಞೆ ಮಾಡಿರುತ್ತೇವೆ. ಅದರೊಂದಿಗೆ ಹೀಗೆ ಸಹ ಪ್ರತಿಜ್ಞೆ ಮಾಡಿದ್ದೇವೆ, ಭಾವೋದ್ರೇಕಗಳಿಗೆ ಒಳಗಾಗಿ ಸಾಮಾನ್ಯವಾಗಿ ದೇವ ಸೃಷ್ಟಿಗಳಲ್ಲಿ ಯಾರಿಗೂ ಮುಸ್ಲಿಮರಿಗೆ ವಿಶಿಷ್ಟವಾಗಿಯೂ ಯಾವುದೇ ರೀತಿಯಲ್ಲಿ ಕಷ್ಟ ಕೊಡಲಾರೆವು ಎಂದು. ಏನು ನಾವು ಈ ಪ್ರತಿಜ್ಞೆ ಪ್ರಕಾರ ವರ್ತಿಸುತ್ತಿರುವೆವೋ? ಈ ರೀತಿಯ ವರ್ತನೆ ನಮ್ಮದಾಗಿದ್ದರೆ ನಾವು ನೈಜ ಮೂಮಿನ್ ಆಗಿದ್ದೇವೆ ಎಂದು ಹೇಳಬಹುದು. ನಾವು ಬೈಅತ್ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತೇವೆ ಎಂದು ಹೇಳಬಹುದು.

ಬೈಅತ್ ಶರತ್ತುಗಳಲ್ಲಿ ಒಂದು ಶರತ್ತು ಹೀಗೆ ಸಹ ಇದೆ. ಅಹಂಭಾವವನ್ನು ಪರಿಪೂರ್ಣವಾಗಿ ತ್ಯಜಿಸಿ ವಿನಯಭಾವ ಮತ್ತು ನಿರಾಡಂಬರತೆಯಿಂದ ಜೀವಿಸುವೆನು ಎಂದು. ವಿನಯ ಮತ್ತು ನಿರಾಡಂಬರತೆಯಿಂದ ಜೀವಿಸುವುದನ್ನು ಜಲ್ಸದ ಒಂದು ಉದ್ದೇಶಲಕ್ಷ್ಯವಾಗಿ ಮಾತ್ರ ಹೇಳಿದ್ದಲ್ಲ. ನಾವು ಅವರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಯಲ್ಲಿಯೇ ನಾನು ವಿನಯ ಮತ್ತು ನಿರಾಡಂಬರತೆಯಿಂದ ಜೀವಿಸುವೆನು ಎಂಬ ಶರ್ತ ಇದೆ. ಆದುದರಿಂದ ಈ ಪ್ರತಿಜ್ಞೆ ಈಡೇರಿಸುವುದು ನಮ್ಮ ಹೊಣೆಗಾರಿಕೆ ಆಗಿದೆ. ನಾವು ಮಾಡಿದ ಬೈಅತ್ ಪ್ರತಿಜ್ಞೆ ಈಡೇರಿಸುವ ಕಡೆಗಿರುವ ಪ್ರಥಮ ಹೆಜ್ಜೆಯಾಗಿದೆ ಇದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಜಮಾಅತಿಗೆ ಸೇರಿರುವ ಎಲ್ಲರೂ ಶ್ರದ್ಧೆಯಿಂದ ನನ್ನ ಈ ಉಪದೇಶವನ್ನು ಆಲಿಸಿರಿ. ಈ ಜಮಾಅತಿಗೆ ಸೇರಿ ನನ್ನೊಂದಿಗೆ ಶಿಷ್ಯ ಸಂಬಂಧವನ್ನು ಸ್ಥಾಪಿಸಲು ಬಯಸುವವರು ಹಾಗೆ ಮಾಡುವುದರ ಉದ್ದೇಶವೇನೆಂದರೆ ಅವರು ಸದ್ವರ್ತನೆಯಲ್ಲಿಯೂ ಸಾತ್ವಿಕತೆಯಲ್ಲೂ ತಖ್ವದಲ್ಲಿಯೂ ಅತ್ಯುನ್ನತ ಪದವಿಗೆ ತಲಪುವಂತವರಾಗಬೇಕು. ಯಾವುದೇ ರೀತಿಯ ಕಲಹ, ಉದ್ಧಟ ವರ್ತನೆ, ದುಷ್ಕರ್ಮ ಅವರ ಸಮೀಪ ಸಹ ಬರಬಾರದು. ಅವರು ಐದು ಹೊತ್ತಿನ ಬಾಜಮಾಅತ್ ನಮಾಝ್ ಅನುಷ್ಠಿಸುವವರಾಗಬೇಕು. ಅವರು ಸುಳ್ಳು ಹೇಳಬಾರದು. ಯಾರಿಗೂ ನಾಲಗೆಯ ಮೂಲಕ ನೋವು ನೀಡಬಾರದು. ಯಾವುದೇ ರೀತಿಯ ಕೆಟ್ಟ ಕೆಲಸ ಮಾಡಬಾರದು. ಯಾವುದೇ ಉದ್ಧಟ ವರ್ತನೆ, ದೌರ್ಜನ್ಯ, ಕಲಹ ಮತ್ತು ಹಿಂಸೆಯ ಯೋಚನೆ ಸಹ ಮಾಡಬಾರದು. ಎಲ್ಲಾ ರೀತಿಯ ಪಾಪ ಕೃತ್ಯಗಳಿಂದಲೂ, ಅಪರಾಧಗಳಿಂದಲೂ ಮಾಡಬಾರದ ಕೆಲಸಗಳಿಂದಲೂ ಆಡಬಾರದ ಮಾತುಗಳಿಂದಲೂ ಭಾವೋದ್ರೇಕಗಳಿಂದಲೂ ಅನಾವಶ್ಯಕ ಕೃತ್ಯಗಳಿಂದಲೂ ದೂರ ಸರಿಯುವವರಾಗಬೇಕು. ಅಲ್ಲಾಹನ ಪರಿಶುದ್ಧ ದಾಸರಾಗಿ, ಕೆಟ್ಟ ಕೆಲಸ ಮಾಡದವರಾಗಿ ವಿನಯಾನ್ವಿತ ದಾಸರಾಗಿ ಪರಿವರ್ತನೆ ಹೊಂದಬೇಕು. ಯಾವುದೇ ವಿಷಕಾರಿ ಸತ್ವ ಅವರ ಅಸ್ತಿತ್ವದಲ್ಲಿ ಇರಬಾರದು. ಎಲ್ಲಾ ಮನುಷ್ಯರ ಬಗ್ಗೆ ಸಹಾನುಭೂತಿ ಅವರ ತತ್ವವಾಗಬೇಕು. ಅಲ್ಲಾಹನಿಗೆ ಭಯಪಡಬೇಕು. ತಮ್ಮ ನಾಲಗೆಗಳನ್ನೂ, ತಮ್ಮ ಕೈಗಳನ್ನೂ, ತಮ್ಮ ಹೃದಯದ ಯೋಚನೆಗಳನ್ನೂ, ಎಲ್ಲಾ ವಿಧದ ಕೊಳಕು ಕಲಹಕಾರಿ

ವಿಧಾನಗಳಿಂದ, ವಿಶ್ವಾಸ ವಂಚನೆಗಳಿಂದ ರಕ್ಷಿಸಿಕೊಳ್ಳಬೇಕು. ಐದು ಹೊತ್ತಿನ ನಮಾಝುನ್ನು ಅತ್ಯಂತ ಆದರಪೂರ್ವಕವಾಗಿ ನೆಲೆನಿಲ್ಲಿಸುವವರಾಗಬೇಕು. ದೌರ್ಜನ್ಯ, ಅತಿರೇಕ ವರ್ತನೆ, ಧನಾಪಹಾರ, ಲಂಚ ಮತ್ತು ಹಕ್ಕುಗಳ ಧ್ವಂಸ ಮತ್ತು ಪಕ್ಷಪಾತ ವರ್ತನೆಗಳಿಂದ ದೂರ ಸರಿಯಬೇಕು. ಕೆಟ್ಟವರ ಸಹವಾಸದಲ್ಲಿ ಕುಳಿತುಕೊಳ್ಳಬಾರದು. ಯಾವುದೇ ಧರ್ಮದ, ಯಾವುದೇ ಕೋಮಿನ, ಯಾವುದೇ ಗುಂಪಿನ ಜನರಿಗೆ ಹಾನಿ ಉಂಟುಮಾಡುವ ಇರಾದೆ ಹೊಂದಬಾರದು. ಪ್ರತಿಯೊಬ್ಬರಿಗೆ ಸತ್ಯಸಂಧನಾದ ಉಪದೇಶಕರಾಗಬೇಕು. ಉದ್ಧಟರಾದ ಜನರು, ದುಷ್ಕರ್ಮಿಗಳು, ಕಲಹಗಾರರು, ದುರ್ನಡತೆಗಾರರು ಖಂಡಿತವಾಗಿಯೂ ಎಂದೂ ನಿಮ್ಮ ಸಭೆಗಳಲ್ಲಿ ಭಾಗವಹಿಸುವವರಾಗಬಾರದು. ಅವರು ನಿಮ್ಮ ಮನೆಗಳಲ್ಲಿ ವಾಸಿಸಬಾರದು. ಅವರು ಹಾಗೆ ವಾಸಿಸಿದರೆ ಎಂದಾದರೂ ನಿಮಗೆ ಅವರು ಹಾನಿ ಉಂಟುಮಾಡುವವರಾಗುವರು. ನನ್ನ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಈ ಉಪದೇಶಗಳನ್ನು ಕೃತಿರೂಪಕ್ಕೆ ತರುವುದು ಕಡ್ಡಾಯವಾಗಿದೆ. ಅಲ್ಲಾಹನು ನಿಮ್ಮನ್ನು ಎಂತಹ ಜಮಾಅತಿಗೆ ಸೇರಿದವರನ್ನಾಗಿ ಮಾಡಲು ಇಚ್ಛಿಸುತ್ತಾನೆಂದರೆ ನೀವು ಒಳಿತಿನಲ್ಲಿಯೂ ಸತ್ಯಸಂಧತೆಯಲ್ಲೂ ಸಕಲ ಲೋಕಕ್ಕೆ ಮಾದರಿಯಾಗುವಿರಿ. ನೀವು ಜಾಗರೂಕರಾಗಿರಿ. ನೀವು ವಾಸ್ತವಿಕವಾಗಿಯೂ ಉತ್ತಮ ಹೃದಯಿಗಳೂ ವಿನೀತರೂ ಸತ್ಯಸಂಧರೂ ಆಗಿರಿ. ನೀವು ಐದು ಹೊತ್ತಿನ ನಮಾಝ್‌ಗಳ ಅನುಷ್ಠಾನದಿಂದಲೂ ಸದ್ಗುಣಗಳಿಂದಲೂ ಗುರುತಿಸಲ್ಪಡುವಿರಿ. ಯಾರಲ್ಲಿ ಕೆಡುಕಿನ ಬೀಜವಿದೆಯೋ ಅವನು ಈ ಉಪದೇಶಗಳಿಗೆ ಬದ್ಧನಾಗಿರಲಾರನು.

ಅಲ್ಲಾಹನು ನಮಗೆಲ್ಲರಿಗೂ ಭಾಗ್ಯ ನೀಡಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಿ ನಮ್ಮನ್ನು ಅಲ್ಲಾಹನು ಮಾಡಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವರೂ ಅವರ ಪ್ರತೀಕ್ಷೆಗಳನ್ನು ಈಡೇರಿಸುವವರೂ ಆಗುವಂತಾಗಲಿ. ಈ ಜಲ್ಸದಿಂದ ಹೆಚ್ಚು ಹೆಚ್ಚಾಗಿ ಲಾಭ ಗಳಿಸುವವರಾಗಲಿ. ನಾವು ನಮ್ಮ ಧಾರ್ಮಿಕ, ಜ್ಞಾನ ಸಂಬಂಧವಾದ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಸುಧಾರಣೆ ಮಾಡುವವರೂ ಮತ್ತು ಈ ಒಳಿತುಗಳು ಶಾಶ್ವತವಾಗಿ ಯಾವಾಗಲೂ ನೆಲೆ ನಿಲ್ಲಿಸುವವರನ್ನಾಗಿಯೂ ಅಲ್ಲಾಹನು ಮಾಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَ نَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-

***Friday Sermon delivered by Hadrath Khaleefatul Masih Al Khamis(atba)***

*At, Jalsa Gah,France. On 04-10-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon